**ಕರ್ನಾಟಕ ಸರ್ಕಾರ** **ಸಿ ಆರ್ ಪಿ ಸಿ 67**

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿಂಧನೂರು.

ಸಿ.ಸಿ. ಸಂಖ್ಯೆಃ 3353/2024 CW-1 PW- 1

| | |
|---|---|
| ಹೆಸರು | ಮಹೆಬೂಬ್‌ಸಾಬ್ ಆನೆಹೊಸೂರು |
| ತಂದೆಯ ಹೆಸರು | ರಂಜಾನ್‌ಸಾಬ್ |
| ವಯಸ್ಸು | 56 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | 11 ನೇ ವಾರ್ಡ್, ತುರ್ವಿಹಾಳ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ28-01-2026

ಮುಖ್ಯ ವಿಚಾರಣೆಃ ಸ ಸ ಅ ಅವರಿಂದ

ಚಾ.ಸಾ. 6 ನನ್ನ ಹೆಂಡತಿ, ಚಾ.ಸಾ. 7 ಮತ್ತು 8 ನನ್ನ ಮಕ್ಕಳು, ಚಾ.ಸಾ. 9 ನನ್ನ ಸೊಸೆ. ಚಾ.ಸಾ. 10 ನನ್ನ ಅಳಿಯ. ಚಾ.ಸಾ. 2 ಮತ್ತು 3 ರವರ ಪರಿಚಯ ಇದೆ. ಆರೋಪಿತನ ಪರಿಚಯ ಇಲ್ಲ. ಆದರೆ, ಆರೋಪಿ ನಮ್ಮ ಮನೆಗೆ ಬಂದು ಕಳ್ಳತನ ಮಾಡಿಕೊಂಡು ಹೋದ ನಂತರ ಪೋಲೀಸರು ಆತನನ್ನು ನನ್ನ ಮನೆಗೆ ಕರೆದುಕೊಂಡು ಬಂದು ನನಗೆ ತೋರಿಸಿದ್ದರು.

ನಾನು, ಚಾ.ಸಾ. 6 ಮತ್ತು 7 ತುರ್ವಿಹಾಳದ 11 ನೇ ವಾರ್ಡ್‌ನಲ್ಲಿ ಮನೆ ಮಾಡಿಕೊಂಡು ವಾಸಿಸುತ್ತಿದ್ದೇವೆ. ನಮ್ಮ ಮನೆಯ ಪಕ್ಕ ನನ್ನ ಸೊಸೆ ಮತ್ತು ಮಗ ಇನ್ನೊಂದು ಮನೆಯಲ್ಲಿ ವಾಸಿಸುತ್ತಿದ್ದಾರೆ. ದಿ: 18-10-2024 ರಂದು ನನ್ನ ಮಗ ಮತ್ತು ಸೊಸೆ ಬೆಂಗಳೂರಿಗೆ ಅವರ ಮನೆಯನ್ನು ಬೀಗ ಹಾಕಿ ಹೋಗಿದ್ದರು. ನಾನು, ಚಾ.ಸಾ. 6 ಮತ್ತು 7 ರವರು ನಮ್ಮ ಮನೆಯಲ್ಲಿ ಮಲಗಿದ್ದಾಗ ಬೆ. 6-00 ರ ಸುಮಾರಿಗೆ ನಾನು ನಮ್ಮ ಸೊಸೆಯ ಮನೆಯನ್ನು ನೋಡಿದಾಗ ಅದರ ಬಾಗಿಲು ತೆರೆದಿತ್ತು, ಅದನ್ನು ಯಾರೋ ಬಿಟ್ಟು ಮತ್ತು ರಾಡ್ ತೆಗೆದುಕೊಂಡು ಬೀಗ ಮುರಿದು ಮನೆಯ ಒಳಗೆ ಹೋಗಿ ಮನೆಯಲ್ಲಿದ್ದ ಬೀರುವನ್ನು ಮುರಿದು ಅದರಲ್ಲಿದ್ದ 2 ತೊಲೆ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿದ್ದರು.

ಸದರಿ ಮನೆಯ ಪಕ್ಕ ಚಾ.ಸಾ. 11 ರವರ ಗ್ಯಾರೇಜ್ ಇದ್ದು, ಅವರು ಸಿ.ಸಿ. ಕ್ಯಾಮರಾ ಅಳವಡಿಸಿದ್ದರು. ಅದನ್ನು ಪರಿಶೀಲಿಸಿದಾಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಮುದ್ದೆಮಾಲು (ರಾಡ್ ಮತ್ತು ಬಿಟ್ಟು) ಗಳನ್ನು ಪಡೆಯಲು

ಚಾ.ಸಾ. 11 ರ ಗ್ಯಾರೆಜ್‌ಗೆ ಹೋದ ವಿಚಾರ ತಿಳಿಯಿತು. ಈ ವಿಚಾರ ನಾವು ಪೋಲೀಸರಿಗೆ ತಿಳಿಸಿ ದೂರನ್ನು ದಾಖಲಿಸಿರುತ್ತೇವೆ.

ದೂರನ್ನು ದಾಖಲಿಸಿದ ನಂತರ ಮ. 2.30 ರ ಸುಮಾರಿಗೆ ಪೋಲೀಸರು ನಮ್ಮ ಮನೆಗೆ ಬಂದು ಪಂಚನಾಮೆ ಜರುಗಿಸಿ ಫೊಟೋ ತೆಗೆದುಕೊಂಡು ಹೋದರು.

ಸಾಕ್ಷಿ ಒಂದು ಸ್ಟೀಲ್ ಬೀಗ, ಬಟ್ಟೆಯ ಬ್ಯಾಗ್, ಆಭರಣದ ಬಾಕ್ಸ್ ಗಳನ್ನು ನೋಡಿ ಸದರಿ ವಸ್ತುಗಳು ಸೊಸೆಯ ಮನೆಯ ಕಟ್ಟೆಯ ಮೇಲೆ ಬಿದ್ದಿದ್ದವು ಎಂದು ಹಾಗೂ ಅವುಗಳನ್ನು ಪೋಲೀಸರು ಮನೆಗೆ ಬಂದಾಗ ತೆಗೆದುಕೊಂಡು ಹೋದರು ಎಂದು ನುಡಿಯುತ್ತಾರೆ.

ಸಾಕ್ಷಿ ದೂರು ಮತ್ತು ಅದರಲ್ಲಿನ ಸಹಿಗಳನ್ನು ನೋಡಿ ಗುರುತಿಸಿದ್ದು, ಅದನ್ನುನಿ.ಪಿ. 1 ಎಂದು, ಸಾಕ್ಷಿ ಸಹಿಗಳನ್ನು ನಿ.ಪಿ. 14(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

ಗುನ್ನಾಸ್ಥಳ ಪಂಚನಾಮೆ ಮತ್ತು ಅದರಲ್ಲಿ ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ. 2 ಎಂದು, ಸಾಕ್ಷಿ ಸಹಿಯನ್ನು ನಿ.ಪಿ. 2(ಎ) ಎಂದು ಗುರುತಿಸಲಾಯಿತು. ನಿ.ಪಿ. 2 ರ ಕಾಲಕ್ಕೆ ತೆಗೆದರೆನ್ನಲಾದ 4 ಭಾವಚಿತ್ರಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ. 3 ರಿಂದ 6 ಎಂದು ಗುರುತಿಸಲಾಯಿತು.

ಕಳ್ಳತನ ಆದ 4 ದಿನಗಳ ನಂತರರ ಪೋಲೀಸರು ಇಂದು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತನನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು. ಆ ಕಾಲಕ್ಕೆ 3 ಭಾವಚಿತ್ರಗಳನ್ನು ತೆಗೆದುಕೊಂಡು ಕಳ್ಳತನ ಮಾಡಿದ ಬಗ್ಗೆ ಆರೋಪಿತನಿಗೆ ವಿಚಾರ ಮಾಡಿರುತ್ತಾರೆ. ಸದರಿ ಕಾಲಕ್ಕೆ ತೆಗೆದರೆನ್ನಲಾದ 3 ಭಾವಚಿತ್ರ ನೋಡಿ ಸಾಕ್ಷಿ ಗುರುತಿಸಿದ್ದು, ಅವುಗಳನ್ನುಯ ನಿ.ಪಿ. 7 ರಿಂದ 9 ಎಂದು ಗುರುತಿಸಲಾಯಿತು. ಕಳ್ಳತನವಾದ ಬಂಗಾರದ ಆಭರಣಗಳನ್ನು ನ್ಯಾಯಾಲಯದ ಆದೇಶದಂತೆ ನಾನು ಪೋಲೀಸರಿಂದ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಸದರಿ ಘಟನೆಗೆ ಸಂಬಂಧಿಸಿದ ಭಾವಚಿತ್ರ ನೋಡಿ ಸಾಕ್ಷಿ ಅದರಲ್ಲಿರುವ ಬಂಗಾರ ಪಡೆದುಕೊಂಡಿದ್ದೇನೆಂದು ನುಡಿಯುತ್ತಾರೆ.

ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ, ನೀಡಿ ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ.)

ಓ. ಹೇ. ಕೇ. ಸರಿ ಇದೆ,

1 ನೇ ಹೆಚ್ಚುವರಿ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ,